<u>ಅಸಲು ದಾವಾಃ-</u> 340/2014 ಪಿ.ಡಬ್ಲ್ಯೂಃ- 1

ದಿನಾಂಕಃ 24.04.2026 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಭೋಧಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ- 9 ರಿಂದ 15 ನೇ ಪ್ರತಿವಾದಿಗಳ ಪರ ಶ್ರೀ.ಟಿಇಎಸ್ ವಕೀಲರಿಂದ</u>

ಈ ದಾವಾ ಆಸ್ತಿಗಳು ಹಾಗೂ ಓಎಸ್ ನಂ.105/2009 ರ ದಾವಾ ಆಸ್ತಿಗಳು ಎರಡೂ ಒಂದೇ ಎಂದರೆ ಸರಿಯಲ್ಲ. ಪ್ರತಿವಾದಿ 9 ರಿಂದ 15 ರವರನ್ನು ಈ ದಾವೆಗೆ ಯಾವ ಉದ್ದೇಶದಿಂದ ಸೇರಿಸಿರುತ್ತೇನೆ ಎಂದರೆ ಸಾಕ್ಷಿಯು 1 ರಿಂದ 8 ನೇ ಪ್ರತಿವಾದಿಗಳ ಪರ ವಕೀಲರು ಹೇಳಿದ್ದರಿಂದ ಪ್ರತಿವಾದಿ 9 ರಿಂದ 15 ರವರನ್ನು ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. 1 ರಿಂದ 8 ನೇ ಪ್ರತಿವಾದಿಗಳ ಪರ ವಕೀಲರ ಹೇಳಿಕೆಯ ಮೇರೆಗೆ ಮಾತ್ರ ನಾನು ಪ್ರತಿವಾದಿ 9 ರಿಂದ 15 ರವರನ್ನು ಈ ದಾವೆಗೆ ಸೇರಿಸಿದ್ದು ಪ್ರತಿವಾದಿ 9 ರಿಂದ 15 ರವರ ಆಸ್ತಿಗಳ ಮೇಲೆ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿ.

ಕೆಂಚಮ್ಮರವರು ಸಲ್ಲಿಸಿದ್ದ ಓಎಸ್ ನಂ.105/2009 ರ ದಾವೆಯು ವಜಾ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಓಎಸ್ ನಂ.105/2009 ರ ದಾವೆಯಲ್ಲಿ ಈ ದಾವೆಯ ಪ್ರತಿವಾದಿ 9 ರಿಂದ 15 ರವರು ಕೌಂಟರ್ ಕ್ಲೈಮ್ ಕೇಳಿದ್ದು ಸದರಿ ಕೌಂಟರ್ ಕ್ಲೈಮ್ ಡಿಕ್ರಿ ಆಗಿರುತ್ತದೆ ಎಂದರೆ ಗೊತ್ತಿಲ್ಲ.

ಈ ದಾವಾ ಆಸ್ತಿಗಳ ಸರ್ವೆ ನಂಬರ್ ಎಷ್ಟು ಎಂದರೆ ಸಾಕ್ಷಿಯು ಹೊನ್ನಾಳಿ ಸರ್ವೆ ನಂಬರ್ 17 ಹಾಗೂ ಬಲಮುರಿ ಸರ್ವೆ ನಂಬರ್ 18 ಎಂದು ನುಡಿಯುತ್ತಾರೆ. ಸರ್ವೆ

ನಂಬರ್ 17 ರಲ್ಲಿ ಎಷ್ಟು ಎಕರೆ ಜಮೀನು ಎಂದರೆ 1 ಎಕರೆ 20 ಗುಂಟೆ, ಸರ್ವೆ ನಂಬರ್ 18 ರಲ್ಲಿ ಎಷ್ಟು ಎಕರೆ ಜಮೀನು ಎಂದರೆ 4 ಎಕರೆ ಹಾಗೂ ಸುಮಾರು ಗುಂಟೆ ಇದೆ ಎಂದು ನುಡಿಯುತ್ತಾರೆ.

ಸರ್ವೆ ನಂಬರ್ 17 ಮತ್ತು 18 ರ ಜಮೀನುಗಳು ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು ಮಾಯಪ್ಪನ 2 ನೇ ಹೆಂಡತಿ ಕೆಂಚಮ್ಮ ಹಾಗೂ ಅವರ ಮಕ್ಕಳ ಜಂಟಿ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶವನ್ನು ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ